ವಲಯದಲ್ಲೂ ಒಂದು ಹೊಸ ಸಂಚಲನ ಮೂಡಿಸಿತ್ತು. ನಮ್ಮ ಸಮಾಜದ ಕೆಲವು ಗಣ್ಯರ ಹೆಣ್ಣುಮಕ್ಕಳು ಕೂಡ ತಮ್ಮ ತಂದೆಯ ಕಾರ್ಯಗಳನ್ನು ಮಾಡಿರುವುದು ಪ್ರಮುಖ ಸುದ್ದಿಯಾಗಿತ್ತು. ಕಳೆದ ವರ್ಷ ನಿರೂಪಕಿ ದಿವ್ಯಾ ಆಲೂರ್‌ರವರು ತಮ್ಮ ತಂದೆಯ ಅಂತ್ಯಸಂಸ್ಕಾರ ಮಾಡಿದ್ದು ಶ್ಲಾಘನೀಯವಾಗಿದ್ದು, ಇವರೆಲ್ಲಾ ನಮ್ಮ ಸಮಾಜದಲ್ಲಿ ಮುನ್ನೆಲೆಯ ಕ್ಷೇತ್ರದಲ್ಲಿರುವುದರಿಂದ ಇಂಥ ನಡೆಗಳು ಥಟ್ಟನೆ ಪ್ರಚಾರಕ್ಕೊಳಗಾಗುತ್ತವೆ. ಇಷ್ಟಾಗಿಯೂ ನಮ್ಮ ಸಮಾಜ ‘ಈ ಒಂದು ನಡೆಯನ್ನು’ ಸಂಪೂರ್ಣವಾಗಿ ಒಪ್ಪಿಕೊಳ್ಳದೆ ಇನ್ನೂ ಅದರ ಸರಿ/ತಪ್ಪುಗಳ ಕುರಿತು ಇಂದಿಗೂ ವ್ಯಾಪಕವಾಗಿ ಚರ್ಚೆಯಾಗುತ್ತಲೇ ಇದೆ.

ನನ್ನ ಆಪ್ತ ಗೆಳತಿ 15 ವರ್ಷಗಳ ಹಿಂದೆಯೇ ತನ್ನ ತಂದೆಯ ಕ್ರಿಯಾಕರ್ಮಗಳನ್ನು ಮಾಡಿದ್ದಳು. ಆದರೆ ಮುಂದೊಂದು ದಿನ ನಾನೂ ಆ ಜಾಗದಲ್ಲಿರುತ್ತೇನೆಂದು ಕಿಂಚಿತ್ ಕಲ್ಪನೆ ಕೂಡ ನನಗಿರಲಿಲ್ಲ. ಇದೀಗ ಸಾಕಷ್ಟು ಮನೆಗಳಲ್ಲಿ ಹೆಣ್ಣುಮಕ್ಕಳು ತಾವೇ ಮುಂದೆ ನಿಂತು ತಂದೆ/ತಾಯಿಯರ ಕ್ರಿಯಾಕರ್ಮಗಳನ್ನು ಮಾಡುತ್ತಿದ್ದಾರೆ. ಸಾಮಾನ್ಯ ಹೆಣ್ಣುಮಕ್ಕಳೂ ಇಂಥ ‘ಬದಲಾವಣೆ ಹೆಜ್ಜೆಯಲ್ಲಿ’ ಇದ್ದಾರೆ ಎಂಬುದೇ ಹೆಮ್ಮೆಯ ಸಂಗತಿ.




## ವಿಧಿ-ಜವಾಬ್ದಾರಿಯ ತಲ್ಲಣಗಳು

ಬಹಳ ಆರೋಗ್ಯದಿಂದಿದ್ದ ನನ್ನ ಅಪ್ಪಾಜಿ ಅಚಾನಕ್ಕಾಗಿ ಪಾರ್ಶ್ವವಾಯುವಿಗೆ ತುತ್ತಾಗಿ ಹಾಸಿಗೆ ಹಿಡಿದು, ನಂತರ ಒಂದರ ಹಿಂದೊಂದು ಗಂಭೀರ ಆರೋಗ್ಯ ತೊಡಕುಗಳು ಅವರನ್ನು ಮುತ್ತಿಕ್ಕಿದವು. ಅನಾಮತ್ತಾಗಿ ವಿಧಿ ನೂಕಿದ ಈ ಪರಿಸ್ಥಿತಿಯನ್ನು ನಾವೆಲ್ಲರೂ ಒಪ್ಪಿಕೊಂಡು ಎದುರಿಸಲೇಕಿತ್ತು.

ಬಹಳಷ್ಟು ಬಾರಿ ಮನಸ್ಸಿನಲ್ಲೊಂದು ಭಾವ ನುಸುಳುತ್ತಿತ್ತು. ನನಗೂ ಒಬ್ಬ ಅಣ್ಣನೋ, ತಮ್ಮನೋ, ‘ಈ ಮನೆಗೆ ಒಂದು ಗಂಡು ದಿಕ್ಕು ಇದ್ದಿದ್ದರೆ?’ ನನ್ನ ಹೆಗಲಭಾರ ಇಲ್ಲವಾಗಿರುತ್ತಿತ್ತೇ! ಅಥವಾ ಈಗಿರುವ ಕಾಲು ಭಾಗದ ಭಾರವಾದರೂ ಕಡಿಮೆಯಾಗುತ್ತಿತ್ತಲ್ಲವೇ! ಆದರೆ, ಇಂದು ಅದೆಷ್ಟೋ ಮನೆಗಳಲ್ಲಿ ಗಂಡು ಮಕ್ಕಳಿದ್ದವರೂ ಹೆತ್ತವರನ್ನು ತಿರುಗಿಯೂ ನೋಡದೆ ತಮ್ಮ ಪಾಡಿಗೆ ಇರುವವರನ್ನು ನೋಡಿದಾಗ, ಹಾಗೇನಾದರೂ ಆಗಿಬಿಟ್ಟಿದ್ದರೆ, ಈಗಿನ ನನ್ನ ಹೆಗಲ ಭಾರಕ್ಕೇನೂ ವ್ಯತ್ಯಯವಾಗುತ್ತಿರಲಿಲ್ಲವಲ್ಲ ಎಂದು ಸಮಾಧಾನಿಸಿಕೊಳ್ಳುತ್ತಿದ್ದೆ.

## ವಾಸ್ತವ-ಸಾರ್ಥಕತೆ

ಕೊನೆಗೂ ಯಾವುದೇ ವೈದ್ಯಕೀಯ ಉಪಚಾರಗಳಿಗೂ ಸ್ಪಂದಿಸದೆ, ಐದು ವರ್ಷಗಳಿಂದ ನರಳಿದ್ದ ಅಪ್ಪ ನಮ್ಮಿಂದ ಕಣ್ಮರೆಯಾದರು.

‘ನೀನು ಎಲ್ಲಾ ಕಡೆ ಹೇಗೆ ನಿಭಾಯಿಸುತ್ತಿದ್ದೀಯೋ, ಈ ಕಾಲದಲ್ಲಿ ಗಂಡುಮಕ್ಕಳೂ ಇಷ್ಟು ಮಾಡುವುದಿಲ್ಲ. ನೀನು ಯಾವುದೇ ಗಂಡು ಮಗನಿಗಿಂತಲೂ ಹೆಚ್ಚು’ ಎಂದು ನನ್ನೆಲ್ಲಾ ಕೆಲಸ ಕಾರ್ಯಗಳನ್ನು ಹತ್ತಿರದಿಂದ ನೋಡಿ ಅರ್ಥಮಾಡಿಕೊಂಡವರು ಹೇಳುತ್ತಿದ್ದರು. ಎಲ್ಲದಕ್ಕಿಂದ ಮುಖ್ಯವಾಗಿ ನನ್ನ ತಾಯಿ, ‘ಇವಳು ಮಗಳಲ್ಲ, ನನಗೆ ಮಗ’ ಎಂದು ಬೇರೆಯವರೊಂದಿಗೆ ನನ್ನ ಬಗ್ಗೆ ಕಣ್ತುಂಬಿಕೊಂಡು ಹೇಳುವಾಗ ಮಿಕ್ಕೆಲ್ಲವೂ ಗೌಣವೆನಿಸುತ್ತದೆ.

ಅಪ್ಪಾಜಿಗಾಗಿ ಇಂತಿಷ್ಟು ಮಾಡಿರುವ ನಾನು ಅವರ ಸಂಸ್ಕಾರ ಮಾಡುವ ಹಕ್ಕು ಮತ್ತು ಧರ್ಮವನ್ನು ಮತ್ತೊಬ್ಬರಿಗೆ ಹೇಗೆ ತಾನೇ ಬಿಟ್ಟುಕೊಡಲಿ. ನನ್ನ ತಂದೆಗೆ ಗಂಡು ಮಕ್ಕಳಿಲ್ಲದಿದ್ದರೇನಂತೆ, ನಾನು ಯಾವುದೇ ಗಂಡು ಮಕ್ಕಳಿಗಿಂತ ಹೆಚ್ಚಾಗಿ ಅವರನ್ನು ನೋಡಿಕೊಂಡಿರುವ ತೃಪ್ತಿಯಂತೂ ಇದೆ.

ಸಮಾಜದಲ್ಲಿ ‘ಹೆಣ್ಣು’ ಎಂಬ ಕಾರಣಕ್ಕೆ ಎದುರಾಗುವ ತರತಮಗಳು ಹಲವು. ಹೆತ್ತವರ ಅಂತ್ಯಸಂಸ್ಕಾರದ ವಿಷಯದಲ್ಲಿಯೂ ಈ ಪಕ್ಷಪಾತ ಮುಂದುವರೆಯುತ್ತದೆ. ‘ಹೆಣ್ಣುಮಕ್ಕಳು ಹೆತ್ತವರ ಅಂತ್ಯಸಂಸ್ಕಾರ ಮಾಡಬಹುದೇ?’ —ಈ ಪ್ರಶ್ನೆ ಸಮಾಜದಲ್ಲಿ ಆಗಾಗ ಚರ್ಚೆಗೆ ಈಡಾಗುತ್ತಲೇ ಇರುತ್ತದೆ. ತಮ್ಮ ತಂದೆ ತಾಯಿಯ ಜವಾಬ್ದಾರಿಯನ್ನು ಪ್ರೀತಿಯಿಂದಲೇ ಹೊತ್ತು ನಿಭಾಯಿಸಿದ್ದ ಹೆಣ್ಣುಮಕ್ಕಳಿಗೆ ಅವರ ಕ್ರಿಯಾಕರ್ಮಗಳನ್ನು ಮಾಡುವ ಹಕ್ಕು ಇಲ್ಲವೇ? ಈ ಬಗ್ಗೆ ನಿಮ್ಮ ಅನಿಸಿಕೆ, ಅನುಭವಗಳಿದ್ದರೆ ಹಂಚಿಕೊಳ್ಳಬಹುದು. ಬರಹ 150 ಪದಮಿತಿಯಲ್ಲಿರಲಿ. ನುಡಿ ಅಥವಾ ಯುನಿಕೋಡ್‌ನಲ್ಲಿ ನಿಮ್ಮ ಲೇಖನವಿರಲಿ. editorsu@sudha.co.inಗೆ ಬರೆದು ಕಳುಹಿಸಿ.

